

# ಸೈಕಲ್ ಜಾಥಾದಿಂದ ಶಿಕ್ಷಣ ಜಾಗೃತಿ

ಹೆಣ್ಣುಮಕ್ಕಳನ್ನು ಉಳಿಸಿ ಹೆಣ್ಣುಮಕ್ಕಳಿಗೆ ಓದಿಸಿ' ಎಂಬ ಕೇಂದ್ರ ಸರ್ಕಾರದ ಯೋಜನೆಯಿಂದ ದೇಶದಲ್ಲಿ ಮಹಿಳೆಯರ ಸ್ಥಿತಿಗತಿಯಲ್ಲಿ ಸಾಕಷ್ಟು ಸುಧಾರಣೆಯಾಗುತ್ತಿದೆ. ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಹಲವು ಕಾರ್ಯಕ್ರಮಗಳ ಹಾಗೂ ಜನರಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇಷ್ಟೆಲ್ಲಾ ಯೋಜನೆ ರೂಪುಗೊಳ್ಳುತ್ತಿದ್ದರೂ ಗ್ರಾಮೀಣ ಭಾಗದ ಮಹಿಳೆಯರು ಶಿಕ್ಷಣ ಪಡೆದುಕೊಳ್ಳುವಲ್ಲಿ ಸಫಲರಾಗುತ್ತಿಲ್ಲ. ಬಡತನ ಹಾಗೂ ಅನಾನುಕೂಲತೆಗಳಿಂದ ಶಿಕ್ಷಣ ವಂಚಿತರಾಗುತ್ತಿದ್ದಾರೆ.

> ಮಹಿಳೆಯರಿಗೆ ಶಿಕ್ಷಣ ತುಂಬಾ ಮುಖ್ಯವಾಗಿದ್ದು, ಒಬ್ಬ ಹೆಣ್ಣಿಗೆ ಶಿಕ್ಷಣ ನೀಡಿದರೆ ಇಡೀ ಸಂಸಾರವನ್ನು ಶಿಕ್ಷಿತಗೊಳಿಸಿದಂತೆ ಎಂಬ ನಂಬಿಕೆ ಇಟ್ಟುಕೊಂಡು ಈ ಸೈಕಲ್ ಜಾಥಾ ಆರಂಭಿಸಿದ್ದೇವೆ.
>
> – ಸುಮಿತ್.



ಒಂದು ಹೆಣ್ಣಿಗೆ ಶಿಕ್ಷಣ ನೀಡಿದರೆ ಇಡೀ ಕುಟುಂಬ ಶಿಕ್ಷಿತವಾಗುವುದು ಎಂಬ ನಂಬಿಕೆ ಇದೆ. ಈ ನಂಬಿಕೆಯನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡು, ಮಹಿಳೆಯರ ಶಿಕ್ಷಣಕ್ಕಾಗಿ ಕೈಲಾದಷ್ಟು ಸಹಾಯ ಮಾಡಬೇಕು ಎಂಬ ಆಲೋಚನೆಯಿಂದ ಮುಂಬೈನ ಸುಮಿತ್ ಮತ್ತು ಪ್ರಿಸಿಲಿಯಾ ಇಬ್ಬರು ಹನ್ನೊಂದು ರಾಜ್ಯಗಳಿಗೆ ಸೈಕಲ್ ಮೂಲಕ ಪ್ರಯಣಿಸಿ, ಹೆಣ್ಣು ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯ ಎಂಬುದನ್ನು ತಿಳಿಸಿಕೊಡುತ್ತಿದ್ದಾರೆ. ಸುಮಾರು 63 ದಿನಗಳಲ್ಲಿ ಕನ್ಯಾಕುಮಾರಿಯಿಂದ ಖಿರ್ದಂಗ್ ಲಾ (ಟಿಬೆಟ್) ವರೆಗೂ ಸುಮಾರು 4200 ಕಿ.ಮಿ ದೂರ ಕ್ರಮಿಸಲಿದ್ದಾರೆ.

ಜು. 21 ರಂದು ಹೊರಟ ಈ ಸೈಕಲ್ ಪ್ರೇಮಿಗಳು ಜು.23 ರಂದು ಬೆಂಗಳೂರಿಗೆ ಆಗಮಿಸಿದ್ದರು. ಆಗ ನಗರದ ಸೈಕ್ಲಿಸ್ಟ್ ಕ್ಲಬ್, ಸೈಕ್ಲಿಂಗ್ ಗ್ರೂಪ್ ಹಾಗೂ ಬೆಂಗಳೂರು ಸೈಕ್ಲಿಂಗ್ ತಂಡಗಳು ಅವರೊಂದಿಗೆ ಕಸ್ತೂರ ಬಾ ರಸ್ತೆಯಿಂದ ಕ್ರೆಸೆಂಟ್ ರಸ್ತೆಯವರೆಗೂ ಸೈಕಲ್‌ನಲ್ಲಿ ಸಾಥ್ ನೀಡಿ ಅವರ ಕೈಗೊಂಡಿರುವ ಒಳ್ಳೆಯ ಕೆಲಸಕ್ಕೆ ಬೆಂಬಲ ನೀಡಿದರು.

## ಬಿದಿರಿನ ಸೈಕಲ್ ಸವಾರಿ

ಸುಮಿತ್ ಹಾಗೂ ಪ್ರಿಸಿಲಿಯಾ ಇಬ್ಬರೂ ಬಿದಿರಿನ ಸೈಕಲ್ ಬಳಸುತ್ತಿರುವುದು ಈ ಪ್ರಯಾಣದ ವಿಶೇಷತೆಯಾಗಿದೆ. ಪರಿಸರ ಸ್ನೇಹಿಯಾದ ಸೈಕಲ್ ಎಲ್ಲರ ಗಮನಸೆಳೆಯುತ್ತಿದ್ದೆ. ಸೈಕ್ಲಿಂಗ್ ಕೇವಲ ಹವ್ಯಾಸವಾಗಿರದೇ ಅದರಿಂದ ಸಮಾಜಕ್ಕೆ ಏನಾದರೂ ಒಳಿತು ಮಾಡಬೇಕು ಹಾಗೂ ಇತರರಿಗೆ ಮಾದರಿಯಾಗಬೇಕು ಎಂಬ ಕಾರಣಕ್ಕಾಗಿ ಈ ನಿರ್ಧಾರ ಮಾಡಿರುವ ಇಬ್ಬರೂ ಶಿಕ್ಷಣ ಹಾಗೂ ಪರಿಸರ ಸಂರಕ್ಷಣೆಗೆ ಒತ್ತು ನೀಡುತ್ತಾ ತಮ್ಮ ಪ್ರಯಾಣ ಮುಂದುವರೆಸುತ್ತಿದ್ದಾರೆ.

## ನಿಧಿ ಸಂಗ್ರಹ

ದೇಶಾದ್ಯಂತ ಎಷ್ಟೋ ಹೆಣ್ಣುಮಕ್ಕಳು ಹಣದ ಕೊರತೆಯಿಂದ ಶಿಕ್ಷಣ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಂತಹವರಿಗೆ ಧನ ಸಹಾಯ ನೀಡಿ ಅವರ ಶಿಕ್ಷಣ ಪಡೆದುಕೊಳ್ಳಲು ಪ್ರೋತ್ಸಾಹಿಸುವ ಉದ್ದೇಶ ಹೊಂದಿರುವ ಇವರು ಪ್ರತಿ ವರ್ಷ ಸುಮಾರು 1500 ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸಲು ಪ್ರಯತ್ನಿಸುತ್ತಿದ್ದು, ತಮ್ಮ ಈ ಸೈಕಲ್ ಪ್ರಯಾಣದಿಂದ 50 ಲಕ್ಷವನ್ನು ಸಂಗ್ರಹಿಸುವ ಗುರಿ ಹೊಂದಿದ್ದಾರೆ.

ಇವರ ಈ ಕೆಲಸಕ್ಕೆ ಗೋದ್ರೇಜ್, ಬೈಯೊಕ್ ಹಾಗೂ ಎನ್‌ಜಿಓ ಐಐಎಮ್‌ಪಿಎಸಿಟಿ ಜೊತೆಯಾಗಿದ್ದು 6 ರಿಂದ 14 ವರ್ಷದ ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕೆ ಬೇಕಾಗುವ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಡಲು ಬದ್ಧವಾಗಿದೆ.

